ಸಂಚಿಕೆ ೦೨ @markonahalli.rawep @markonahalli rawe

# ಕೃಷಿ ಕಲರವ

ಕೃಷಿ ಕಾರ್ಯಾನುಭವದ ಕಥೆ ,
ರೈತರ ಜೊತೆ!

## ಮಾರ್ಕೋನಹಳ್ಳಿ

## ಮುನ್ನುಡಿ:

ಪ್ರಿಯ ಮಿತ್ರರೇ, RAWE-P ಪರಿವಿಡಿಯು; ಈಗಾಗಲೇ ಪ್ರಾಯೋಗಿಕ ಜ್ಞಾನ ಪಡೆಯಲು ಹೊರಡಿರುವಂತಹ ವಿದ್ಯಾರ್ಥಿ-ವಿದ್ಯಾರ್ಥಿನಿಯರ ನಾವಿನ್ಯ ಕಲ್ಪನೆಗಳ ಅಳವಡಿಕೆ ಹಾಗೂ ಗ್ರಾಮೀಣ ಭಾಗ ಕೃಷಿ ಕ್ಷೇತ್ರದ ಅನುಭವ, ಪ್ರಾಯೋಗಿಕ ಜ್ಞಾನವನ್ನು ಮೈಗೂಡಿಸಿಕೊಳ್ಳಲು ಅತ್ಯುತ್ತಮ ಜಾಗವಾಗಿದೆ. ಈ ಪರಿವಿಡಿಯ ಜೊತೆ-ಜೊತೆಗೆ "ಕೃಷಿ ಕಲರವ" ಸಂಚಿಕೆ ತರುವುದು ವಿದ್ಯಾರ್ಥಿಗಳಲ್ಲಿ ಸವಿಸ್ತಾರವಾಗಿ ಮಾಹಿತಿ ಕಲೆಹಾಕುವಿಕೆ, ಪದ್ಧತಿ ಪ್ರಾತ್ಯಕ್ಷಿಕೆ,ಸ್ವಯಂ ಸೇವೆ,ಗುಂಪು ಚರ್ಚೆಯ ಕೌಶಲ್ಯವನ್ನು ಹೆಚ್ಚಿಸಿ, ರೈತರ ಸಮಸ್ಯೆಯನ್ನು ಪರಿಹರಿಸಲು ತುಂಬಾ ಸಹಕರಿಯಾಗಿರುತ್ತದೆ. ಈ ನಮ್ಮ ಪ್ರೀತಿಯ ವಿದ್ಯಾರ್ಥಿಗಳ ಪ್ರಯತ್ನ ಯಾವುದೇ ಅಡಚಣೆ ಇಲ್ಲದೆ ಸುಲಭವಾಗಿ ಸಾಗಲೆಂದು ಆಶಿಸುತ್ತೇನೆ.



- ಡಾ.ವೈ.ಎಸ್.ಶಿವಲಿಂಗಯ್ಯ
ಪ್ರಾಧ್ಯಾಪಕರು & ಮುಖ್ಯಸ್ಥರು
ಕೃಷಿ ವಿಸ್ತರಣಾ ವಿಭಾಗ

RAWE-P ಪರಿವಿಡಿಯ ಹಲವು ಚಟುವಟಿಕೆಗಳನ್ನು "ಕೃಷಿ ಕಲರವ" ಸಂಚಿಕೆಯ ಮಾರ್ಗದಲ್ಲಿ ಹೊರ ತರುವುದು ಹಾಗೂ ಪ್ರಾಯೋಗಿಕ ಕೌಶಲ್ಯಗಳ ಅನುಭವ ಹೆಚ್ಚಿಸುವಲ್ಲಿ ಉಪಯೋಗವಾಗಿದೆ. ವಿದ್ಯಾರ್ಥಿಗಳ ಈ ನಡೆಯ ಮಾರ್ಗಕ್ಕೆ ಶುಭವಾಗಲಿ.



ಡಾ.ವೈ.ಎಮ್.ಗೋಪಾಲ್
ಸಹಾಯಕ ಪ್ರಾಧ್ಯಾಪಕರು
Teacher in-charge
(ಮಾರ್ಕೋನಹಳ್ಳಿ)

### ರೈತನಿಗಾಗಿ:

ಪ್ರತಿಯೊಂದು ಅನ್ನದ ಅಗುಳಿಗು ಅವನ ಶ್ರಮವೇ ಪ್ರತೀಕ,
ಮಾಡುತ್ತಿರುವನು ಜಗತ್ತಿನ ಶ್ರೇಷ್ಠದ ಕಾಯಕ,
ಹಗಲಿರುಳು ದುಡಿದು ಆಳುತ್ತಿರುವ ಜಗದ ಮಾಲೀಕ,
ಸರಿಯಾದ ಬೆಲೆ ಸಿಗದೆ ಕಂಬನಿಯಲ್ಲೇ ಕಳೆಯುವ ಬದುಕ,
ಅವನಿಲ್ಲದ ಲೋಕ ,ಅದುವೇ ಊಹಿಸಲಾಗದ ನರಕ.

-ಗೀತ ಸಿ.ಆರ್

# ನಿಮಗಿದು ಗೊತ್ತೇ?

## "ತೆಂಗು ಆಧಾರಿತ ಬಹುಮಹಡಿ ಬೆಳೆ ಪದ್ಧತಿ"





- ತೆಂಗು ವಾಣಿಜ್ಯ ಬೆಳೆಗಳಲ್ಲಿ ಒಂದು, ಆದರೆ ತೆಂಗು ಬೆಳೆಗಾರರು ದೀರ್ಘಕಾಲದವರೆಗೂ ಇಳುವರಿಗಾಗಿ ಕಾಯಬೇಕು. ತೆಂಗಿನ ಮಧ್ಯ ಹೆಚ್ಚು ಅಂತರವಿರುವುದರಿಂದ ಭೂಮಿಯ ಸದ್ಬಳಕೆ ಮಾಡಿಕೊಳ್ಳಬಹುದಾಗಿದೆ.ತೆಂಗು ಆಧಾರಿತ ಬಹುಬೆಳೆ ಪದ್ಧತಿಯಲ್ಲಿ ಭೂಮಿಯನ್ನು ಬಳಸಿ ಎರಡಕ್ಕಿಂತ ಹೆಚ್ಚು ಬೆಳೆ ಬೆಳೆಯಬಹುದು. ತೆಂಗು 3 ಹಂತದಲ್ಲಿ ಬೆಳೆಯುತ್ತದೆ, ಹಾಗಾಗಿ ಮೊದಲ 8 ವರ್ಷದವರೆಗು ಯಾವುದಾದರು ವಾರ್ಷಿಕ ಬೆಳೆ ಬೆಳೆಯಬಹುದು.

- 8 ರಿಂದ 20 ವರ್ಷದವರೆಗೆ ಎರಡನೇ ಹಂತ ಹಾಗೂ 20 ವರ್ಷದ ನಂತರ ಮೂರನೇ ಹಂತ,ಈ ಕಾಲದಲ್ಲಿ ನೆರಳು ಹೆಚ್ಚಾದರಿಂದ ನೆರಳು ಸಹಿಸುವಂತಹ ಬೆಳೆ ಲವಂಗ, ಹೂ, ಬಾಳೆ, ಜಾಕಾಯಿ, ಮೆಣಸು, ಅನಾನಸು, ವೀಳ್ಯದೆಲೆ ಬೆಳೆ ಬೆಳೆಯುವುದು ಉತ್ತಮ.

- ತೆಂಗಿನಮರದಿಂದ 2ಮೀ ಅಂತರವನ್ನು ಬಿಟ್ಟು ಬೇರೆ ಬೆಳೆಯನ್ನು ಬೆಳೆಯಬೇಕು.ಇದರಿಂದ ರೈತರಿಗೆ ವರ್ಷವಿಡಿ ಆರ್ಥಿಕವಾಗಿ ಅನುಕೂಲವಾಗುತ್ತದೆ, ಇರುವಂತಹ ಕಡಿಮೆ ಜಾಗದಲ್ಲಿ ವರ್ಷವಿಡಿ ಕೆಲಸಗಳಿಸಬಹುದು.

- ಉದಾಹರಣೆ:2014ರಲ್ಲಿ ತೆಂಗಿನ ತೋಟದಲ್ಲಿ ಶೇ 75ರಷ್ಟು ಇಳುವರಿ ಬರುತಿದ್ದ ಜಾಗದಲ್ಲಿ,ಬಹುಮಹಡಿ ಪದ್ಧತಿಯನ್ನು ಅಳವಡಿಸಿದ ನಂತರ 200ರಷ್ಟು ಹೆಚ್ಚು ಇಳುವರಿ ಹೆಚ್ಚಾಗಿದೆ ಎಂದು ಡಾll ಎಂ ರವಿಭಟ್ ಮುಖ್ಯಸ್ಥರು, ಬೆಳೆ ಉತ್ಪಾದನ ವಿಭಾಗ, ಕೇಂದ್ರೀಯ ಪ್ಲಾಂಟೇಶನ್ ಬೆಳೆಗಳ ಸಂಶೋಧನಾ ಕೇಂದ್ರ, ಕಾಸರಗೋಡು ರವರು ಸಂದರ್ಶನದಲ್ಲಿ ತಿಳಿಸಿದ್ದಾರೆ.

ದಿ:19/08/2022

## ಶುರುವಾಯಿತು ನಮ್ಮ ಡ್ಯೂಟಿ, ಮಾಡಬೇಕು ಮತ್ತೆ ನಾಟಿ





- ಯೋಗೇಶ್ ರವರ ಗದ್ದೆ ಕಲಿಸಿತು ಕೆಲಸ ಮಾಡುವ ಶ್ರದ್ಧೆ
- ಬೆಂಕಿ ರಾಮಣ್ಣರರವರ ,ದನದ ಕೊಟ್ಟಿಗೆಯ ಗೊಬ್ಬರ ನೀಡಿದೆ ಫಲವತ್ತತೆ ಹೆಚ್ಚಿಸಲು ದ್ವಾರ,ಕೊಟ್ಟಿಗೆ ಗೊಬ್ಬರ ಎಲ್ಲಾ ರೀತಿಯ ಸೂಕ್ಷ್ಮಾಣು ಜೀವಿಗಳ ಚಟುವಟಿಕೆ ಹೆಚ್ಚಿಸಿ ಲಘುಪೋಶಕಾಂಶಗಳ ಪೂರೈಕೆ ಮಾಡುತ್ತದೆ.
- ನಾವೀನ್ಯ ಕೃಷಿ ಉಪಕರಣಗಳ ಕುರಿತು 'ಮೆದುಳಿನ ದಾಳಿ' ಎನ್ನುವ ಹೊಸ ಕಾರ್ಯಕ್ರಮದ ಕುರಿತು ಗುಂಪು ಚರ್ಚೆ ನಡೆಸಿದೆವು. ಸುಮಾರು 6–8 ಹೊಸ ಉಪಕರಣಗಳ ತಯಾರಿ ವಿಧಾನ ಹಾಗೂ ಕೆಲಸದ ತತ್ವವನ್ನು ಚರ್ಚಿಸಿದೆವು.

ದಿ:20/08/2022

## ಪಡೆಯಲು ಹೆಚ್ಚು ಇಳುವರಿ, ಕಟ್ಟಿದೆವು ಟೊಮೋಟೊ ಗಿಡಕ್ಕೆ ಹುರಿ




- ಟೊಮೋಟೊ ಗಿಡದ ಕುಡಿ ಎಳೆದು ದಾರ ಕಟ್ಟುವುದನ್ನು ಕಲಿತೆವು, ಕಳೆ ನಿರ್ವಹಣೆ,ತೇವಾಂಶ ಸಂರಕ್ಷಣೆಗಾಗಿ ಮಲ್ಚಿಂಗ್ ಹಾಕುವುದನ್ನು ಅನುಸರಿಸುತ್ತಿದ್ದಾರೆ. *''ಜಿಲ್ಲಾಧಿಕಾರಿಯ ನಡೆ ಹಳ್ಳಿಯ ಕಡೆ'' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ADA, MLA, AC ರವರನ್ನು ಭೇಟಿಯಾಗಿ ನಮ್ಮನ್ನು ಪರಿಚಯಿಸಿಕೊಂಡು ಬಂದ ಉದ್ದೇಶವನ್ನು ತಿಳಿಸಿದೆವು.

ದಿ:21/08/2022

## ಬದು ಕಟ್ಟೋಣ, ಬೆಳೆ ಸಂಗ್ರಹಾಲಯಕ್ಕೆ ಲೇಔಟ್ ಸಿದ್ಧಪಡಿಸೋಣ



- ಬೆಳೆ ಸಂಗ್ರಹಾಲಯಕ್ಕೆ ಭೂಮಿಯನ್ನು ಸಿದ್ಧಪಡಿಸಿ, ಬದು ಮಾಡಿ ,ಲೇಔಟ್ ತಯಾರಿಸಿದೆವು, ಸಂಜೆ ಮಾಹಿತಿ ಸಂಗ್ರಹಾಲಯವನ್ನು ಶುಚಿ ಮಾಡಿಕೊಂಡೆವು.
- ಬದುವಿನ ಮುಖ್ಯ ಉದ್ದೇಶವು ಮಳೆಯಿಂದ ಹರಿಯುವ ನೀರನ್ನು ನಿಧಾನಗೊಳಿಸುವುದು,ಫಿಲ್ಟರ್ ಮಾಡುವುದು ಮತ್ತು ಅದರಿಂದ ಮಣ್ಣಿನ ಅವನತಿಯನ್ನು ಕಡಿಮೆ ಮಾಡಲು ಅವಕಾಶವಾಗುತ್ತದೆ.

ದಿ:22/08/2022

## ಮುಂದುವರಿದ ಲೇಔಟ್ ಸಿದ್ಧಪಡಿಕೆ






- ಉಳಿದ ಲೇಔಟ್ ತಯಾರಿಕೆಯ ಕೆಲಸ ಮುಂದುವರೆಯಿತು, ನಿಗದಿತ ಪ್ರಾಧ್ಯಾಪಕರ ಭೇಟಿ ಹಾಗೂ ಲೇಔಟ್ ಕುರಿತು ಸಲಹೆ, ಸಂಶಯವಿರುವ ವಿಷಯದ ಬಗ್ಗೆ ಸಲಹೆ ಪಡೆದೆವು.
- ಪ್ಲಾಂಟ್ ಲೇಔಟ್ ಉತ್ಪನ್ನದ ಪ್ರತಿಯೊಂದು ಘಟಕ/ಭಾಗವು ಸಸ್ಯದ ಮೂಲಕ ಅನುಸರಿಸಬೇಕಾದ ಮಾರ್ಗವನ್ನು ಯೋಜಿಸುತ್ತಿದೆ, ವಿವಿಧ ಭಾಗಗಳ ಮಾರ್ಗಗಳನ್ನು ಸಂಯೋಜಿಸುತ್ತದೆ. ಅಂತಿಮವಾಗಿ ಯೋಜನೆಯನ್ನು ಸರಿಯಾಗಿ ಜಾರಿಗೆ ತರಲು ಅನುಕೂಲವಾಗುತ್ತದೆ.

ಕೃಷಿ ಕಲರವ 2022-23

ದಿ:23/08/2022

# ಪ್ರಗತಿಪರ ರೈತರ ಕೃಷಿ ಕ್ಷೇತ್ರ ಭೇಟಿ



- ಕೆಂಪೇಗೌಡ ರೈತರು ಬೆಳೆದಂತಹ ಟೊಮೋಟೊ , ಅಡಿಕೆ, ತೆಂಗಿನ ತೋಟಕ್ಕೆ ಭೇಟಿ ನೀಡಿದೆವು ಕಂಡುಬಂದ ರೋಗ , ಕೀಟಗಳ ಬಗ್ಗೆ ಹಾಗೂ ನಿರ್ವಹಣೆಗಾಗಿ ಸಿಂಪಡಿಸಿದ ಔಷಧಿಯ ಬಗ್ಗೆ ವಿವರಿಸಿದರು.
- ಪ್ರಗತಿಪರ ರೈತರ ಭೇಟಿಯಿಂದ ಅವರು ಅಳವಡಿಸಿಕೊಂಡಿರುವ ಹೊಸ ಸಾಂಪ್ರದಾಯಿಕ ಪದ್ಧತಿಗಳು, ರಾಸಾಯನಿಕ ಔಷಧಿಗಳ ಬಗ್ಗೆ ತಿಳಿಯಲು ಅನುಕೂಲವಾಯಿತು.

ದಿ:24/08/2022

# ಬಿತ್ತನೆಯ ಪೂಜೆ, ಬರಲೆಂದು ಚೆನ್ನಾಗಿ ಬೆಳೆ





- ಮುಂಜಾನೆ ಬಿತ್ತನೆಯನ್ನು ಶುರುಮಾಡುವ ಮುನ್ನ ಬಿತ್ತನೆಯ ಪೂಜೆ ನಡೆಸಿದೆವು, ರೈತರ ಕುರಿತು ಮೊದಲ ಸಾಮಾನ್ಯ ಸಭೆಗಾಗಿ ಸಿದ್ಧತೆಯನ್ನು ಮಾಡಿಕೊಂಡೆವು.
- ಸರಿಯಾದ ಪ್ರಮಾಣದ ಬೆಸಲ್ ಡೋಸನ್ನು ಹಾಕಿ ಗ್ರಾಮದ ಹಿರಿಯರಿಂದ ಪೂಜೆ ಸಲ್ಲಿಸಿ ಬಿತ್ತನೆಯ ಕಾರ್ಯವನ್ನು ಸರಿಯಾದ ಅಂತರವನ್ನು ಪಾಲಿಸಿ ಪ್ರಾರಂಭಿಸಿದೆವು.

ದಿ:25/08/2022

# ಸಾಮಾನ್ಯ ಸಭೆ, ADA ರವರ ಭೇಟಿ





- ರೈತರ ಬಳಿ ಗ್ರಾಮೀಣ ಕೃಷಿ ಕಾರ್ಯಾನುಭವದ ಉದ್ದೇಶ, ಮಾಹಿತಿ ಕೇಂದ್ರ ಉದ್ಘಾಟನೆ, e-KYCಯನ್ನು ಮಾಡಿಕೊಟ್ಟೆವು.
- ADA ರವರು ರೈತರಿಗೆ ನಮಗೆ ತಿಳಿದಿರುವ ಕೃಷಿ ಜ್ಞಾನವನ್ನು ಹಂಚುವ ಬಗ್ಗೆ ಸಂದೇಶ ನೀಡಿದರು.





- ಶಿಕ್ಷಕರ ಭೇಟಿ – ತೆಂಗಿನಲ್ಲಿ ಕಂಡುಬರುವ ಕೀಟಗಳ ಬಗ್ಗೆ ಮಾಹಿತಿ ಹಾಗೂ ಅದನ್ನು ತಡೆಗಟ್ಟಬಹುದಾದ ಕ್ರಮಗಳನ್ನು ತಿಳಿಸಿ ಕೊಟ್ಟರು.